**ದಿನಾಂಕಃ 25.07.2025 ರಂದು ಸಾಕ್ಷಿದಾರರು ಹಾಜರಿದ್ದು ಸಾಕ್ಷಿಗೆ ಸತ್ಯ ಪ್ರತಿಜ್ಞೆ ಮಾಡಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ವಾದಿ ಪರ ಶ್ರೀ ಎನ್.ಟಿ.ಎಸ್. ವಕೀಲರಿಂದಃ–**

1. ನಿಪಿ–2 ರಲ್ಲಿ ರಂಗಪ್ಪ ಎನ್ನುವವರು ಸಹಿ ಮಾಡಿದ್ದಾರೆ. ನಿಪಿ–2 ರಲ್ಲಿ ತಿಪ್ಪೇಸ್ವಾಮಿಯವರ ಸಹಿ ಇರುವುದಿಲ್ಲ. ಬುರುಜನಮಲ್ಲಪ್ಪನವರ ಇಬ್ಬರು ಪತ್ನಿಯರ ಮಕ್ಕಳು ದಾವಾ ಸ್ವತ್ತುಗಳನ್ನು ಸೇರಿ ಅವರ ಜಂಟೀ ಕುಟುಂಬದ ಸ್ವತ್ತುಗಳನ್ನು ಇಲ್ಲಿಯವರೆಗೆ ಯಾವುದೇ ವಿಭಾಗ ಮಾಡಿಕೊಂಡಿರುವುದಿಲ್ಲ. ನಮ್ಮ ಕುಟುಂಬದ ಎಲ್ಲಾ ಸದಸ್ಯರ ಒಪ್ಪಿಗೆಯ ಮೇರೆಗೆ ದಾವಾ ಸ್ವತ್ತುಗಳನ್ನು ಒಳಗೊಂಡು ಕುಟುಂಬದ ಎಲ್ಲಾ ಸ್ವತ್ತುಗಳನ್ನು ವಾದಿಯ ತಂದೆ ಓಬಣ್ಣ ಮತ್ತು ಸಂಜೀವಪ್ಪನವರು ದೊಡ್ಡಮಲ್ಲಪ್ಪನ ಮಗ ಸಿದ್ದಣ್ಣನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಓಬಣ್ಣ ಮತ್ತು ಸಂಜೀವಪ್ಪನವರಿಗೆ ಕಾನೂನುಬದ್ಧ ಹಕ್ಕು ಇದ್ದುದ್ದರಿಂದ ದೊಡ್ಡಮಲ್ಲಪ್ಪನ ಮಗ ಸಿದ್ದಣ್ಣನವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ.

2. ನಾವು ಸಿದ್ದಣ್ಣನವರಿಂದ ದಿನಾಂಕಃ27.12.1988 ರಂದು ಮಾಡಿಕೊಂಡ ಕ್ರಯದ ಕರಾರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ. ಸದರಿ ಕರಾರು ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ವರ್ಗಾವಣೆ ಪತ್ರದ ಆಧಾರದ ಮೇಲೆ ಸಂಜೀವಪ್ಪ ಮತ್ತು ಓಬಣ್ಣನವರನ್ನು ಹೊರತುಪಡಿಸಿ ಪ್ರತಿವಾದಿಗಳಾದ ನಾವು ದಾವಾ ಸ್ವತ್ತನ್ನು ಖಾತೆ ಮಾಡಿಸಿಕೊಂಡಿರುತ್ತೇವೆ ಎಂದರೆ ಸರಿ. ದಿನಾಂಕಃ27.12.1988 ರಲ್ಲಿ ಕ್ರಯದ ಕರಾರು ಪತ್ರದ ಮೂಲಕ ಆಸ್ತಿಗಳನ್ನು ಬಿಡಿಸಿಕೊಳ್ಳುವಾಗ ಉಳಿದ ಎರಡು ಆಸ್ತಿಗಳನ್ನು ಸಂಜೀವಪ್ಪ ಮತ್ತು ಓಬಣ್ಣನವರ ಭಾಗದ ಬಾಬ್ತನ್ನು ಸಿದ್ದಣ್ಣನವರಿಗೆ ಬಿಟ್ಟುಕೊಟ್ಟಿದ್ದೇವೆ ಎಂದು ತೋರಿಸಲು ದಾಖಲೆಗಳು ಇರುವುದಿಲ್ಲ.

3. ದಿನಾಂಕಃ10.01.2000 ರಂದು ದಾವಾ ಸ್ವತ್ತುಗಳನ್ನು ವಾದಿ ಮತ್ತು ಪ್ರತಿವಾದಿಗಳು ವಿಭಾಗ ಮಾಡಿಕೊಂಡಿದ್ದಾರೆ ಎಂದರೆ ಸರಿಯಲ್ಲ. ಅದರ ಪ್ರಕಾರವಾಗಿ ವಾದಿ ತನ್ನ ಭಾಗದ ಸ್ವತ್ತಿನ

ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸರಿಯಲ್ಲ. ವಾದಿಯನ್ನು ದಾವಾ ಸ್ವತ್ತಿನಿಂದ ಹೊರಗೆ ಹಾಕಲು ಪ್ರಯತ್ನಿಸಿದ್ದೇವೆ ಎಂದರೆ ಸರಿಯಲ್ಲ. ವಾದಿಗೆ ದಾವಾ ಸ್ವತ್ತಿನಲ್ಲಿ ಕಾನೂನುಬದ್ಧ ಹಕ್ಕು ಇದೆ ಎಂದರೆ ಸರಿಯಲ್ಲ. ದಿನಾಂಕಃ27.12.1988 ರಂದು ನಮ್ಮ ಮತ್ತು ವಾದಿಯರ ಮಧ್ಯ ಯಾವುದೇ ಕರಾರು ಆಗಿಲ್ಲ ಎಂದರೆ ಸರಿಯಲ್ಲ. ವಾದಿ ಬುರುಜನ ಮಲ್ಲಪ್ಪನವರ ವಾರಸುದಾರನಾಗಿರುವುದರಿಂದ ದಾವಾ ಸ್ವತ್ತಿನಲ್ಲಿ ಆತನಿಗೆ ಹಕ್ಕು ಇದೆ ಎಂದರೆ ಸರಿಯಲ್ಲ.

4. ನಾವು ವಾದಿಯೊಂದಿಗೆ ಮಾಡಿಕೊಂಡ ಪಾಲುವಿಭಾಗದಲ್ಲಿ ವಾದಿಗೆ ಸರ್ವೆ ನಂಬರ್ಃ368 ರಲ್ಲಿ 28 ಗುಂಟೆ ಮತ್ತು ಸರ್ವೆ ನಂಬರ್ಃ53/1 ರಲ್ಲಿ 6 ½ ಗುಂಟೆ ಜಮೀನು ಬಂದಿರುತ್ತದೆ ಎಂದರೆ ಸರಿಯಲ್ಲ. ನಿಪಿ–2 ರಂತೆ ಖಾತೆ ಮಾಡಿಸಿಕೊಳ್ಳಲು ನಿರಾಕರಿಸಿ ವಾದಿಯನ್ನು ದಾವಾ ಸ್ವತ್ತಿನಿಂದ ಹೊರಹಾಕಲು ಪ್ರಯತ್ನಿಸಿರುತ್ತೇನೆ ಎಂದರೆ ಸರಿಯಲ್ಲ. ದಿನಾಂಕಃ10.05.2018 ರಂದು ದಾವಾ ಸ್ವತ್ತುಗಳನ್ನು ಪಾಲುವಿಭಾಗ ಮಾಡಿಕೊಳ್ಳಲು ವಾದಿ ನಮ್ಮನ್ನು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ವಾದಿಯ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಮುಕ್ತ ಹೇಳಿಕೆ ಮತ್ತು ನನ್ನ ಉಕ್ತ ಲೇಖನಕ್ಕೆ ತಕ್ಕಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ,. ಹಿರಿಯೂರು.